Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 12-06-2022

**ಪತ್ರಿಕಾ ಪ್ರಕಟಣೆ:**

## ವಿದ್ಯುಕ್ತವಾಗಿ ಜರುಗಿದ "ಆವಿಷ್ಕಾರ್–2022" ಉತ್ಸವ

ಕೆ.ಎಲ್.ಎಸ್ ವಿ.ಡಿ.ಐ.ಟಿ ಹಳಿಯಾಳದಲ್ಲಿ ಜೂನ್ 11 ರಂದು "ಆವಿಷ್ಕಾರ್–2022" ರಾಜ್ಯ ಮಟ್ಟದ ತಾಂತ್ರಿಕ, ಸಾಂಸ್ಕೃತಿಕ ಉತ್ಸವ ವಿದ್ಯುಕ್ತವಾಗಿ ನೆರವೇರಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಟಾಟಾ ಮೋಟಾರ್ಸ್ ಲಿ. ಧಾರವಾಡದ ಮಾನವ ಸಂಪನ್ಮೂಲ ವಿಭಾಗ ಮುಖ್ಯಸ್ಥರಾದ ಶ್ರೀ. ಡಿ. ಎಸ್. ಆರ್. ಪ್ರಭು ಅವರು ಮಾತನಾಡುತ್ತ ವಿದ್ಯಾರ್ಥಿಗಳು ವಿಷಯ ಜ್ಞಾನದ ಜೊತೆಗೆ ಆಧುನಿಕ ಕೈಗಾರಿಕೆಗಳಿಗೆ ಅಗತ್ಯವಿರುವ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ. ವಿನಾಯಕ ಲೋಕುರ್ ಅವರು ಮಾತನಾಡುತ್ತ ಇಂಥ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಮತ್ತು ಪ್ರತಿಭೆಯನ್ನು ಪರೀಕ್ಷಿಸುವ ವೇದಿಕೆಯಾಗಿದೆ. ಇಂದಿನ ದಿನಗಳಲ್ಲಿ ತಂತ್ರಜ್ಞರು ಇಲೆಕ್ಟ್ರಿಕ್ ವಾಹನಗಳ ನಿರ್ಮಾಣ ಮತ್ತು ಬ್ಯಾಟರಿ ತಂತ್ರಜ್ಞಾನ ಸುಧಾರಣೆಗೆ ಒತ್ತು ನೀಡಿ ವಿದೇಶಿ ಅವಲಂಬನೆಯನ್ನು ತಗ್ಗಿಸಲು ಪ್ರಯತ್ನಿಸಬೇಕೆಂದು ಕರೆ ನೀಡಿದರು. ಟಾಟಾ ಮೋಟಾರ್ಸ್ ಲಿ. ಧಾರವಾಡದ ಡೆಪ್ಯೂಟಿ ಜನರಲ್ ಮ್ಯಾನೇಜರ್ ಶ್ರೀ. ರಾಜಶೇಖರ್ ಬೆಲ್ಲದ್ ಗೌರವ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಈ ಕಾರ್ಯಕ್ರಮದ ಪ್ರಯುಕ್ತ ನಡೆದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ತಾಂತ್ರಿಕ ಪ್ರಬಂಧ ಮಂಡನೆ ಸ್ಪರ್ಧೆಯಲ್ಲಿ 50 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ರಾಣಿ ಚೊರ್ಲೇಕರ್ ಮತ್ತು ಮಯೂರಿ ಪಟವರ್ಧನ್, ಇಲೆಕ್ಟ್ರಿಕಲ್ ವಿಭಾಗದಲ್ಲಿ ಸ್ಪಂದನಾ ಮುನವಳ್ಳಿ ಮತ್ತು ಗಣೇಶ ಪಾಟೀಲ್, ಸಿವಿಲ್ ವಿಭಾಗದಲ್ಲಿ ನಂದನ್ ಕುಲಕರ್ಣಿ, ಮೆಕ್ಯಾನಿಕಲ್ ವಿಭಾಗದಲ್ಲಿ ಆಶಿಶ್ ಶಿಂಧೆ, ಇ ಎಂಡ್ ಸಿ ವಿಭಾಗದಲ್ಲಿ ದೀಪ್ತಿ ಮಹಾಲೆ ಪ್ರಥಮ ಸ್ಥಾನ ಪಡೆದುಕೊಂಡರು. ಸಾಕ್ಷ್ಯ ಚಿತ್ರ ನಿರ್ಮಾಣ ಸ್ಪರ್ಧೆಯಲ್ಲಿ ವಿಶಾಲ್ ಹೂಗಾರ್, ರಸಪ್ರಶ್ನೆ ಸ್ಪರ್ಧೆಯಲ್ಲಿ ಗೌರೀಶ್ ಕೊಟ್ಯಾಲ್ ಮತ್ತು ಶ್ರವಣ್ ಪಾಟೀಲ್ ಪ್ರಶಸ್ತಿ ಪಡೆದುಕೊಂಡರು. ಹಾಡುಗಾರಿಕೆ, ನೃತ್ಯ, ಹಗ್ಗ ಜಗ್ಗಾಟ, ಕಂಪ್ಯೂಟರ್ ಕೋಡಿಂಗ್ ಮತ್ತು ಮಿನಿ ಕ್ರಿಕೆಟ್ ಸ್ಪರ್ಧೆಗಳನ್ನೂ ಆಯೋಜಿಸಲಾಗಿತ್ತು.

ಪ್ರಾಂಶುಪಾಲರಾದ ಡಾ. ವಿ ಎ ಕುಲಕರ್ಣಿ ಸಭಿಕರನ್ನು ಸ್ವಾಗತಿಸಿದರು. ಕಾರ್ಯಕ್ರಮದ ಸಂಚಾಲಕರಾದ ಡಾ. ಮಹೇಂದ್ರ ದೀಕ್ಷಿತ್ "ಆವಿಷ್ಕಾರ್–2022" ರ ವರದಿ ಸಾದರಪಡಿಸಿದರು. ಸಿವಿಲ್ ವಿಭಾಗ ಮುಖ್ಯಸ್ಥರಾದ ಪ್ರೊ. ಹರ್ಷ ಜಾಧವ್ ವಂದಿಸಿದರು. ವಿದ್ಯಾರ್ಥಿನಿಯರಾದ ಸಂಜನಾ ಶಿವಾಪುರಮಠ, ಶ್ರೀನಿಧಿ ಹೆಗಡೆ ಮತ್ತು ರಮ್ಯಾ ಕೆ. ನಿರೂಪಿಸಿದರು. ಎಲ್ಲ ವಿಭಾಗಗಳ ಮುಖ್ಯಸ್ಥರು, ಬೋಧಕ ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


KLS VDIT
Through Technology
UttaraKannada Dist. - 581329
Cultural Fest